## ಸಬೂಬಿಗೆ ಇಲ್ಲ ಅವಕಾಶ

'ಸಾಲ ಕೇಳಿ ಸ್ನೇಹ ಕಳೆದುಕೊಳ್ಳಬೇಡಿ' ಎನ್ನುವ ಬರಹವುಳ್ಳ ಬೋರ್ಡ್‌ಗಳನ್ನು ಕೆಲ ಅಂಗಡಿಗಳಲ್ಲಿ ನೇತುಹಾಕಲಾಗಿರುತ್ತದೆ. ಆದರೆ ಚಿಕ್ಕಮಗಳೂರು ಜಿಲ್ಲೆಯ ಕೊಪ್ಪ ಪಟ್ಟಣದ ಅಂಗಡಿಯೊಂದರಲ್ಲಿ ನೇತುಹಾಕಲಾಗಿರುವ ಬೋರ್ಡ್ ಕೊಂಚ ಭಿನ್ನತೆಯಿಂದ ಕೂಡಿದೆ. ಗ್ರಾಹಕರು ಯಾವೆಲ್ಲ ರೀತಿ ಸಬೂಬು ಹೇಳಿ ಹಣ ಕೊಡುವುದರಿಂದ ತಪ್ಪಿಸಿಕೊಳ್ಳುತ್ತಾರೆ ಅನ್ನುವುದು ಈ ಬೋರ್ಡಿನ ಮೇಲೆ ಒಮ್ಮೆ ಕಣ್ಣಾಡಿಸಿದರೆ ತುಂಬಾ ಸ್ಪಷ್ಟವಾಗಿ ಗೊತ್ತಾಗುತ್ತದೆ. ಅಂಗಡಿಯಲ್ಲಿ ಸಾಮಗ್ರಿಗಳನ್ನು ತೆಗೆದುಕೊಳ್ಳುವವರೆಗೆ ಸುಮ್ಮನಿರುವ ಗ್ರಾಹಕರು ಹಣಕೊಡಬೇಕಾದ ಸಮಯದಲ್ಲಿ ಈ ಬೋರ್ಡಿನಲ್ಲಿರುವಂತಹ ನುಡಿಮುತ್ತುಗಳನ್ನು ಉದುರಿಸುತ್ತಾರೆ. ಇದು ಆ ಅಂಗಡಿಯ ಮಾಲೀಕರ ಅನುಭವದಿಂದ ರೂಪುಗೊಂಡ ಬೋರ್ಡೋ, ಮುಂದಾಲೋಚನೆಯ ಕರಾಮತ್ತೋ ಅಥವಾ ಈ ಬೋರ್ಡನ್ನು ತಯಾರಿಸಿದವರ ಕೈಚಳಕವೋ ಗೊತ್ತಿಲ್ಲ. ಅಂಗಡಿಗೆ ಬರುವ ಗ್ರಾಹಕರು ಈ ಬೋರ್ಡಿನತ್ತ ಕಣ್ಣಾಡಿಸಿದ ಮೇಲೆ ಅಪ್ಪಿತಪ್ಪಿ ಸಾಲ ಕೇಳುವುದಿಲ್ಲ, ಸಬೂಬು ಹೇಳುವುದಿಲ್ಲ. ಬೋರ್ಡಿನ ಕೊನೆಯ ಭಾಗದಲ್ಲಿರುವ, 'ಸಾಲ ತೆಗೆದುಕೊಳ್ಳುವಾಗ ಇಲಿ, ಸಾಲ ತೆಗೆದುಕೊಂಡ ಮೇಲೆ ಹುಲಿ' ಎನ್ನುವ ವಾಕ್ಯ ಕೆಲ ಭಂಡ ಗ್ರಾಹಕರ ಮನಸ್ಥಿತಿಯನ್ನೂ ಸೂಚಿಸುತ್ತದೆ.

**–ಚಾವಲ್ಮನೆ ಸುರೇಶ್ ನಾಯಕ್, ಚಿಕ್ಕಮಗಳೂರು**






## ಕಾಫಿಪುಡಿ ಮಷಿನ್@75

ಇದು ಕಾಫಿ ಪುಡಿ ಯಂತ್ರ. ಸುಮಾರು 75 ವರ್ಷಗಳಿಂದ ನಮ್ಮ ಮಾವನವರ ಮನೆಯಲ್ಲೇ ಬಳಕೆಯಲ್ಲಿತ್ತು. ಹುರಿದ ಕಾಫಿ ಬೀಜಗಳನ್ನು ಈ ಯಂತ್ರದ ಮೂಲಕ ಪುಡಿ ಮಾಡಲು ಉಪಯೋಗಿಸಲಾಗುತ್ತಿತ್ತು. ಬಳಕೆಯೂ ಸುಲಭವಾಗಿತ್ತು. ಅನುಕೂಲಕರ ಜಾಗದಲ್ಲಿ ಈ ಪುಟ್ಟ ಯಂತ್ರವನ್ನು ಬಿಗಿದು ಅದರೊಳಗೆ ಹುರಿದ ಬೀಜಗಳನ್ನು ಹಾಕಿ ಕೈಯಿಂದ ತಿರುಗಿಸಿದರೆ ಕ್ಷಣಾರ್ಧದಲ್ಲಿ ಹದವಾದ ಪುಡಿ ಸಿದ್ಧವಾಗುತ್ತಿತ್ತು. ಈಗಲೂ ನಮ್ಮ ಮನೆಯಲ್ಲಿ ಇದು ಸುಸ್ಥಿತಿಯಲ್ಲಿದೆ. ಸ್ವತಃ ನಾವೇ ಮಾಡುತ್ತಿದ್ದ ಪುಡಿಯಿಂದ ತಯಾರಿಸಿದ ಕಾಫಿಯಂತೂ ತುಂಬಾನೇ ಚೆನ್ನಾಗಿರುತ್ತಿತ್ತು. ಕಾಲಾನುಕ್ರಮೇಣ ಇದರ ಬಳಕೆ ನಿಂತಿದೆ. ಈಗೇನಿದ್ದರೂ ದೊಡ್ಡ ದೊಡ್ಡ ಯಂತ್ರಗಳಿಂದ ಪುಡಿ ಮಾಡಿದ ಕಾಫಿ ಪುಡಿಯಷ್ಟೇ ಬಳಕೆ. ಅದೂ ಇನ್‌ಸ್ಟಂಟ್ ಕಾಫಿ ಪುಡಿಗೆ ಹೆಚ್ಚು ಬೇಡಿಕೆ.

**–ಭಾರತೀ ಗಂಗಾಧರ್, ಬೆಂಗಳೂರು**

